ತೆರೆದ–ಅಂಚೆ

ನಿತ್ಯಾಯ ನಿರವದ್ಯಾಯ, ಸತ್ಯಾನಂದಚಿದಾತ್ಮನೇ ।
ಸರ್ವಾಂತರಾತ್ಮನೇ ಶ್ರೀ, ಮದ್ವೆಂಕಟೇಶಾಯ ಮಂಗಲಮ್ ॥

# ಶ್ರೀ ಕಾಶಿವಿಶ್ವನಾಥ ದೇವಸ್ಥಾನ

ಅಗ್ರಹಾರ, ಚಾಂತಾರು ಗ್ರಾಮ, ಬ್ರಹ್ಮಾವರ – 576 213, ಉಡುಪಿ ತಾಲೂಕು ಮತ್ತು ಜಿಲ್ಲೆ.

# ಶ್ರೀ ವೆಂಕಟರಮಣ ದೇವಸ್ಥಾನ ಮತ್ತು ನಾಗ ಬ್ರಹ್ಮಸ್ಥಾನ

## ಇದರ ಜೀರ್ಣೋದ್ಧಾರ



# ವಿಜ್ಞಾಪನಾ ಪತ್ರ







ಅಮರೀಕಬರೀಭಾರಭ್ರಮರೀಮುಖರೀಕೃತಮ್।
ದೂರೀಕರೋತು ದುರಿತಂ ಗೌರೀಚರಣಪಂಕಜಮ್॥

# ಮನವಿ

"ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ" ಎಂಬ ಮಂತ್ರವಾಹಿನೀ ಹರಿದಿದೆ ವಿಶ್ವವಾಙ್ಮಯ ಜಗತ್ತಿನಲ್ಲಿ ಹೀಗೆ ನೂರಾರು ಉದಾತ್ತಧ್ಯೇಯವುಳ್ಳ ಭದ್ರ ಬುನಾದಿಯ ಮೇಲೆ ನಿಂತಿದೆ ಈ ಭಾರತ ಧರಣಿ. ಧರ್ಮದ ಬೀಡು, ಕರ್ಮದ ಗೂಡು, ಭಗವಂತನ ನಾಡು. ವಿಶ್ವದ ಕಣಕಣಗಳಲ್ಲಿಯೂ ಭಗವದ್ವಿಭೂತಿಯು ಹರಡಿದೆ. ಸರ್ವಜ್ಞನೂ, ಸರ್ವಶಕ್ತನೂ, ಸರ್ವಾಂತರ್ಯಾಮಿಯಾದ ಭಗವಂತ ಸತ್ಯ ಶಿವ ಸೌಂದರ್ಯಗಳ ಸಾಕ್ಷಾತ್ಕಾರನೇ ಹೌದು. ಲೋಕರಂಜಕ ತಾಪ ಪಾಪಭಂಜಕ ಮಹಾಮಹಿಮನಾಗಿ, ಅಣುರೇಣುತೃಣಕಾಷ್ಠಗಳಲ್ಲಿ ಅಂತರ್ಯಾಮಿಯಾಗಿ ಭಗವದ್‌ಭಕ್ತರ ರಕ್ಷಕನಾಗಿ ಇದ್ದಾನೆ ಎಂಬ ವಚನ ಪಚನವಾಗಿದೆ ನಮ್ಮ ಹೃದಯಾಂತರಾಳದಲ್ಲಿ.

ಭಗವಂತನ ನಾಡಿನಲ್ಲಿ ಅದೆಷ್ಟೋ ದೇಗುಲಗಳಲ್ಲಿ ಅದೆಷ್ಟೋ ದೇವರು ಶೋಭಿಸುತ್ತಿದ್ದಾನೆ. ಅಂತೆಯೇ ಉಡುಪಿ ತಾಲೂಕು ಬ್ರಹ್ಮಾವರದಿಂದ ಪೂರ್ವ ದಿಕ್ಕಿನಲ್ಲಿರುವ ಚಾಂತಾರು ಗ್ರಾಮ ನಿಡಂಪಳ್ಳಿ ಎಂಬಲ್ಲಿರುವ ಸೂರಪ್ಪಯ್ಯನ ಅಗ್ರಹಾರದಲ್ಲಿ ಕಾಶಿವಿಶ್ವನಾಥ, ವೆಂಕಟರಮಣ, ಪರಿವಾರ ದೈವಗಳ ಸಾನ್ನಿಧ್ಯವಿದೆ ಮತ್ತು ಸೂರಪ್ಪಯ್ಯನ ಅಗ್ರಹಾರಕ್ಕೆ ಪ್ರಾಚೀನವಾದ ಮತ್ತು ಭವ್ಯವಾದ ಪರಂಪರೆ ಇದೆ. ಇದರ ಸಂಸ್ಥಾಪಕರಾದ ಪಾಂಡೇಶ್ವರ ಸೂರಪ್ಪಯ್ಯನವರು (ಕ್ರಿ.ಶ. 1690–1755) ಕೆಳದಿ ಸಂಸ್ಥಾನದಲ್ಲಿ ಮಂಗಳೂರು ಪ್ರಾಂತ್ಯದ ಗವರ್ನರ್ ಜನರಲ್ ಆಗಿದ್ದರು. ಇವರನ್ನು ದಿವಾನ್ ಸೂರಪ್ಪಯ್ಯ ಮತ್ತು ಬಾರಕೂರು ಸೂರಪ್ಪಯ್ಯ ಎಂದೂ ಕರೆಯಲಾಗುತ್ತಿತ್ತು. ಇವರಿಗೆ ಎಲ್ಲಾ ರಾಜ ಮಾನ್ಯ ಗೌರವಗಳೂ ಲಭಿಸಿದ್ದವು. ಇವರು ಚಾಂತಾರು ಗ್ರಾಮದಲ್ಲಿ 12 ಬ್ರಾಹ್ಮಣ ಮನೆಗಳು ಮತ್ತು ತನಗೆ ಆಡಳಿತಕ್ಕೆ ಒಂದು ದೊಡ್ಡಮನೆ ಹೀಗೆ 13 ಮನೆಗಳನ್ನೊಳಗೊಂಡ ಅಗ್ರಹಾರವನ್ನು ಕಟ್ಟಿಸಿ ಕೆಳದಿಯ ನಾಯಕರಾದ 2ನೇ ಸೋಮಶೇಖರ ನಾಯಕರ ಸಮ್ಮುಖದಲ್ಲಿ ಕ್ರಿ.ಶ. 1743ರ ದುಂದುಭಿ ಸಂವತ್ಸರದ ಮಾರ್ಗಶಿರ ಶುದ್ಧ ಪಂಚಮಿಯಂದು ಅಗ್ರಹಾರವನ್ನು ಸ್ಥಾಪಿಸಿದರು. ಅಗ್ರಹಾರ ವ್ಯಕ್ತಿ ಮತ್ತು ತತ್ಸಂಬಂಧಿತ ಭಟ ಮಾನ್ಯಗಳನ್ನು ನಡೆಸಿಕೊಂಡು ಬರುವಂತೆ, ಅಲ್ಲಿನ ಬ್ರಾಹ್ಮಣರಿಗೆ ಧರ್ಮ ಸಾಧನಗಳನ್ನು ನೀಡುವುದರ ಮೂಲಕ ಮತ್ತು ಕಾಶಿ ವಿಶ್ವನಾಥ, ದುರ್ಗಾದೇವಿ ಮತ್ತು ವಿನಾಯಕ ದೇವರನ್ನು ಸಂತಾನಪ್ರಾಪ್ತಿಗಾಗಿ ಪ್ರತಿಷ್ಠಾಪಿಸುವ ಮೂಲಕ ಈ ಅಗ್ರಹಾರ ಪ್ರಾರಂಭವಾಗಿರುವುದಾಗಿ ದಾಖಲೆಗಳು ತಿಳಿಸುತ್ತವೆ.

ಕಾಶಿ ವಿಶ್ವನಾಥ ದೇವಸ್ಥಾನ ಪೂರ್ವಾಭಿಮುಖವಾಗಿ ಸ್ಥಾಪಿಸಲ್ಪಟ್ಟಿದ್ದು, ಇದರ ಇಕ್ಕೆಲಗಳಲ್ಲಿ ಮತ್ತು ಹಿಂಬದಿಯಲ್ಲಿ ಬ್ರಾಹ್ಮಣರ ಮನೆಗಳಿವೆ. ಇದರ ಸಮೀಪ ವೆಂಕಟರಮಣ ದೇವಸ್ಥಾನ ಉತ್ತರಾಭಿಮುಖವಾಗಿ ಸ್ಥಾಪಿತವಾಗಿದೆ. (ಅತೀ ಪ್ರಾಚೀನ). ವೆಂಕಟರಮಣ ಮೂರ್ತಿ ಸುಂದರವಾದ ಕೆತ್ತನೆಗಳಿಂದ ಕೂಡಿದೆ. ಇದು ಹೊಯ್ಸಳ ಕಾಲದ ಶಿಲ್ಪ ಮತ್ತು ಸುಮಾರು 11ನೇ ಶತಮಾನದಷ್ಟು ಹಿಂದಿನದೆಂದು ಪ್ರೊ. ಗುರುರಾಜ ಭಟ್ಟರು ಅಭಿಪ್ರಾಯ ಪಡುತ್ತಾರೆ. ಈ ವಿಗ್ರಹವು 3.7 ಅಡಿ ಎತ್ತರವಿದೆ. ವೆಂಕಟರಮಣ ದೇವಸ್ಥಾನದಲ್ಲಿ ಕಳೆದ 80 ವರ್ಷಗಳಿಂದ ಸಾಮಾನ್ಯವಾಗಿ ಮಾಘ ಮಾಸದಲ್ಲಿ 11 ದಿನಗಳ ಭಜನೆ ಹಾಗೂ 12ನೇ ದಿನ ಭಜನಾ ಮಂಗಲೋತ್ಸವ ಕಾರ್ಯಕ್ರಮ ಬಹಳ ವಿಜೃಂಭಣೆಯಿಂದ ಜರಗುತ್ತದೆ. ಇಲ್ಲಿಂದ ಪೂರ್ವಕ್ಕೆ ದೊಡ್ಡದಾದ ಕೆರೆ ಇದೆ. ಪೂರ್ವ ಮೂಲೆಯಲ್ಲಿ ಬೆಳೆದ ಮರಗಳ ಮಧ್ಯ ನಾಗಬನ ಮತ್ತು ಬ್ರಹ್ಮಸ್ಥಾನ ಇದೆ. ರಾಜರು ನೀಡಿದ ಉಂಬಳಿಗಳ ಉತ್ಪತ್ತಿಗಳಿಂದ ಈ ದೇವಸ್ಥಾನಗಳ ಪೂಜೆ, ನೈವೇದ್ಯ, ಅಮೃತಪಡಿ ಮತ್ತು ನಂದಾದೀಪ ಹಾಗೂ ಉತ್ಸವಾದಿಗಳು ಮುಂತಾದ ಸೇವೆಗಳು ನಿರಂತರವಾಗಿ ನಡೆಯಿಸಿಕೊಂಡು ಬರಲಾಗುತ್ತಿತ್ತು.

ಸೂರಪ್ಪಯ್ಯನ ಅಗ್ರಹಾರ 18 ಮತ್ತು 19ನೇ ಶತಮಾನದ ಆದಿಭಾಗದಲ್ಲಿ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಹುಲ್ಲು ಮಾಡಿನ ಆಗಿನ ಬ್ರಾಹ್ಮಣರ ಮನೆಗಳು ಎರಡು ಬಾರಿ ಅಂದರೆ ಕ್ರಿ.ಶಕ 1817 ಮತ್ತು 1840 ರಲ್ಲಿ ಬೆಂಕಿಗಾಹುತಿಯಾದ ಬಗ್ಗೆ ದಾಖಲೆಗಳು ಇವೆ. ಕ್ರಿ.ಶಕ 1817ರಲ್ಲಿ ಬೆಂಕಿ ಅನಾಹುತವಾದ ಕುರಿತ ತಪಾಸಣೆ ವರದಿಗಳು ಲಭ್ಯವಿದೆ. ಕ್ರಿ.ಶಕ 1840 ರಲ್ಲಿ ಆಗಿನ ಜಿಲ್ಲಾ ಕಲೆಕ್ಟರರು ಭೇಟಿ ನೀಡಿದ ಸಂದರ್ಭದಲ್ಲಿ ಸಭೆ ಸಮಾರಂಭಕ್ಕೆ ಆಚೀಚೆಗಿನ ಮನೆಯ ಮಾಡುಗಳಿಗೆ ಸೇರಿಸಿದಂತೆ ಭಾರೀ ಚಪ್ಪರ ಹಾಕಿದ್ದರು. ಅಗ್ರಹಾರದ ಶಿಸ್ತು, ವ್ಯವಸ್ಥೆ ಮತ್ತು ಉತ್ತಮ ಗ್ರಂಥ ಇರುವುದು ಇದನ್ನೆಲ್ಲಾ ಗಮನಿಸಿದ ಜಿಲ್ಲಾ ಕಲೆಕ್ಟರರು ಅಗ್ರಹಾರವೆಂದರೆ

ಸೂರಪಯ್ಯನ ಅಗ್ರಹಾರ, ಬಾಕಿ ಅಗ್ರಹಾರಗಳು ನೆಪಮಾತ್ರಕ್ಕೆ ಎಂದು ಹೊಗಳಿದರು. ಅದೇ ದಿನ ರಾತ್ರಿ ಒಂದು ಸಣ್ಣ ಅಜಾಗರೂಕತೆಯಿಂದಾಗಿ ಇದೇ ಚಪ್ಪರಕ್ಕೆ ಬೆಂಕಿ ಹಿಡಿದು ಎಲ್ಲಾ ಮನೆಗಳೂ ಕಾಶಿ ವಿಶ್ವನಾಥನ ಮಂದಿರವೂ ಸುಟ್ಟು ಹೋದವು.

ನಂತರ ಸೂರಪ್ಪಯ್ಯನವರ ವಂಶಸ್ಥರಾದ ಇನಾಂದಾರ ಪರಮೇಶ್ವರಯ್ಯ (1843–1905) ನವರ ಕಾಲದಲ್ಲಿ ಈ ದೇವಾಲಯಗಳು ಜೀರ್ಣೋದ್ಧಾರ ಗೊಂಡಿರುತ್ತದೆ. ಆನಂತರ ಬ್ರಹ್ಮಾವರ ವಾಸುದೇವರಾಯರು (1926–2009). 1986ರಲ್ಲಿ ಶ್ರೀ ವೆಂಕಟರಮಣ ದೇವರ ಗುಡಿಯನ್ನು ಪುನರ್ ನಿರ್ಮಿಸಿ ಪ್ರತಿಷ್ಠಾಪನೆ ಮಾಡಿರುವರು. ಹಾಗೇ ಇವರು 1994ರಲ್ಲಿ ಕಾಶೀ ವಿಶ್ವನಾಥ, ದುರ್ಗಾದೇವಿ ಮತ್ತು ವಿನಾಯಕ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಅಷ್ಟಬಂಧ ಪುನಃಪ್ರತಿಷ್ಠೆ ಮಾಡಿರುವರು. ನಾಗಬನ ಯಥಾಸ್ಥಿತಿಯಲ್ಲಿ ಇದ್ದು ಬ್ರಹ್ಮಸ್ಥಾನ ಸಂಪೂರ್ಣ ಜೀರ್ಣಗೊಂಡಿದೆ. ಹಿಂದಿನ ಕಟ್ಟಡದ ಅಡಿಪಾಯ ಮಾತ್ರ ಈಗ ಕಾಣಿಸುತ್ತಿದೆ.

ಮೇಲಿನ ಇತಿಹಾಸಗಳನ್ನು ಅವಲೋಕಿಸಿದರೆ ಈ ಅಗ್ರಹಾರ, ದೇವಸ್ಥಾನಗಳು, ನಾಗಬನ ಮತ್ತು ಬ್ರಹ್ಮಸ್ಥಾನ ಇವುಗಳು ಅತೀ ಪ್ರಾಚೀನ ಪರಂಪರೆಗಳಿಂದ ಬಂದಿದ್ದ ಕಾರಣಿಕ ಕ್ಷೇತ್ರವಾಗಿ ಕಂಡು ಬರುತ್ತದೆ. ಕಾಲ ಗರ್ಭಕ್ಕೆ ಅನುಸಾರವಾಗಿ ದೇವಾಲಯಗಳು ಶಿಥಿಲಗೊಳ್ಳುವುದು ಸ್ವಾಭಾವಿಕ. ಹೀಗಾದಾಗ ಬಿಂಬಗಳಲ್ಲಿ ಚೈತನ್ಯ ಹೀನತೆ ಉಂಟಾಗುತ್ತದೆ. ಅಂತಹ ದೇವಸ್ಥಾನಗಳನ್ನು ಪುನರುಜ್ಜೀವನಗೊಳಿಸಿ, ಬಿಂಬಗಳಲ್ಲಿ ಪ್ರಾಣ ಪ್ರತಿಷ್ಠೆಯನ್ನು ಮಾಡಿದರೆ ಇಡೀ ಊರಿಗೆ ಒಳ್ಳೆಯದೆ ಆಗುತ್ತದೆ ಎಂದು ದೃಢವಾಗಿ ಹೇಳಬಹುದು. ಜೀವಮಾನದಲ್ಲಿ ಒಮ್ಮೆ ಬರುವ ಇಂತಹ ಅವಕಾಶಗಳಲ್ಲಿ ನಮ್ಮನ್ನು ತೊಡಗಿಸಿಕೊಂಡರೆ ಅದು ನಮ್ಮ ಪೂರ್ವ ಜನ್ಮದ ಸುಕೃತವೇ ಇರಬೇಕೆಂದು ಭಾವಿಸಬಹುದು. ಜೀರ್ಣವಾದ ಈ ದೇಗುಲಗಳನ್ನು ಮತ್ತೆ ಪುನರುಜ್ಜೀವನಗೊಳಿಸುವ ಕಾರ್ಯಕ್ಕೆ ಚಿಂತನೆ ನಡೆದಿದೆ. ಅದಕ್ಕೆ ಭಗವದ್ ಭಕ್ತರಾದ ನಿಮ್ಮ ತನು–ಮನ ಧನ ಸಹಾಯಕ್ಕಾಗಿ ಈ ಮನವಿ. ಈ ಶುಭ ಕೆಲಸಕ್ಕೆ ನಾವೆಲ್ಲರೂ ಒಂದುಗೂಡಿ ಅಳಿವಿನ ಅಂಚಿನಲ್ಲಿರುವ ಈ ದೇಗುಲಗಳನ್ನು ಜೀರ್ಣೋದ್ಧಾರ ಗೊಳಿಸೋಣವೇ, ಈ ಕೆಲಸಕ್ಕೆ 'ದೀರ್ಘಸೂತ್ರೀ ವಿನಶ್ಯತಿ' ಎಂಬಂತೆ ವಿಳಂಬತನವು ಒಳಿತಲ್ಲ. ಆದಷ್ಟು ಶೀಘ್ರದಲ್ಲಿ ಉತ್ಸಾಹ ಸಂಪನ್ನರಾಗಿ ನಮ್ಮ ಈ ಕಾರ್ಯವನ್ನು ಸತ್‌ಸಂಕಲ್ಪಗೊಳಿಸಿ, ಸಿದ್ಧಿ, ವೃದ್ಧಿಯೊಂದಿಗೆ ಕೃತಕೃತ್ಯರಾಗೋಣ. ನಮ್ಮ ಹೃದಯದ ಕದ ತೆಗೆದು ಭಗವಂತನ ಪೂರ್ಣಾನುಗ್ರಹಕ್ಕೆ ಪಾತ್ರರಾಗೋಣ.

ಈ ಕ್ಷೇತ್ರದಲ್ಲಿ ದೋಷಗಳ ಪರಿಹಾರ ನಡೆಸಿ, ದೇವತಾ ಸಾನಿಧ್ಯಗಳ ಪುನರ್ ಪ್ರತಿಷ್ಠಾಪನೆ ನಡೆಸಲು ಸಂಕಲ್ಪ ಬದ್ಧರಾಗಿ ಈ ಕ್ಷೇತ್ರದ ಪುನರ್ ನಿರ್ಮಾಣದ ಸಮಗ್ರ ಯೋಜನೆಗಳಿಗೆ ಅಂದಾಜು ವೆಚ್ಚ 65 ಲಕ್ಷ ರೂಪಾಯಿ (ಅರವತ್ತೈದು ಲಕ್ಷ) ಆಗ ಬಹುದೆಂದು ತೀರ್ಮಾನಿಸಲಾಗಿದೆ. ಭಕ್ತಾದಿಗಳು ಉದಾರ ಮನಸ್ಸಿನಿಂದ ದೇಣಿಗೆ ನೀಡಿ ಈ ಸತ್ಕಾರ್ಯದಲ್ಲಿ ಶ್ರದ್ಧಾ ಭಕ್ತಿಯಿಂದ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಧನ ಸಹಾಯ ಮಾಡಲಿರುವ ಭಕ್ತಾದಿಗಳು ತಮ್ಮ ಉದಾರ ದೇಣಿಗೆಯನ್ನು ಶ್ರೀ ಕಾಶಿ ವಿಶ್ವನಾಥ ವೆಂಕಟರಮಣ ಬ್ರಹ್ಮಸ್ಥಾನದ ಜೀರ್ಣೋದ್ಧಾರ ಸಮಿತಿ **KARNATAKA BANK, AMBAGILU BRANCH : S.B. A/c. No. : 0182500101296101 (IFSC : KARB0000018)** ಕರ್ನಾಟಕ ಬ್ಯಾಂಕ್ ಅಂಬಾಗಿಲು ಇವರಿಗೆ ಕಳುಹಿಸಿ, ತಮ್ಮ ಪೂರ್ಣ ವಿಳಾಸವನ್ನು ನೀಡಬೇಕಾಗಿ ವಿನಂತಿ.

||ಶಂ ಸರ್ವೇಭ್ಯಃ||

## ದೇವಸ್ಥಾನದ ಜೀರ್ಣೋದ್ಧಾರದ ಅಂದಾಜು ವೆಚ್ಚ

| | | | |
|---|---|---|---|
| ಕಾಶಿ ವಿಶ್ವನಾಥ ದೇವಸ್ಥಾನದ ಮೇಲ್ಛಾವಣಿ ದುರಸ್ತಿ | ..................... | ರೂ. : | 15,00,000.00 |
| ಸುತ್ತಿನಲ್ಲಿ ಹಾಸುಕಲ್ಲು ಜೋಡಿಸುವಿಕೆ | ..................... | ರೂ. : | 4,00,000.00 |
| ಲಲಿತ ಮಂಟಪಕ್ಕೆ ಗ್ರಾನೈಟ್ | ..................... | ರೂ. : | 2,50,000.00 |
| ವಿನಾಯಕ ದೇವರ ಗರ್ಭಗುಡಿ | ..................... | ರೂ. : | 3,50,000.00 |
| ದುರ್ಗಾಪರಮೇಶ್ವರಿ ದೇವರ ಗರ್ಭಗುಡಿ | ..................... | ರೂ. : | 3,50,000.00 |
| ನೀರಿನ ವ್ಯವಸ್ಥೆ | ..................... | ರೂ. : | 1,50,000.00 |
| ವೆಂಕಟರಮಣ ದೇವಸ್ಥಾನ ಮೊದಲಿನಂತೆ ಪುನರ್ ನಿರ್ಮಾಣ | | | |
| ಗರ್ಭಗುಡಿಯ ನಿರ್ಮಾಣ | ..................... | ರೂ. : | 10,00,000.00 |
| ಸುತ್ತು ಮರದ ದಳಿ ಮತ್ತು ಗೋಡೆಯ ರಚನೆ | ..................... | ರೂ. : | 5,00,000.00 |
| ಲಕ್ಷ್ಮೀ ಮಂಟಪ | ..................... | ರೂ. : | 4,00,000.00 |
| ಮೇಲ್ಛಾವಣಿ ರಚನೆ | ..................... | ರೂ. : | 6,00,000.00 |
| ಬ್ರಹ್ಮಸ್ಥಾನ ಸಂಪೂರ್ಣ ನಿರ್ಮಾಣ | ..................... | ರೂ. : | 10,00,000.00 |

# ಜೀರ್ಣೋದ್ಧಾರ ಸಮಿತಿ

**ಆಡಳಿತ ಮೊಕ್ತೇಸರರು :** ಶ್ರೀ ಪಿ. ಸೂರಪ್ಪಯ್ಯ ರಾವ್

**ಗೌರವಾಧ್ಯಕ್ಷರು :** ಶ್ರೀ ಪಾಂಗಾಳ ರಬೀಂದ್ರ ನಾಯಕ್, ಹನುಮಾನ್ ಟ್ರಾನ್ಸ್‌ಪೋರ್ಟ್ಸ್
ಶ್ರೀ ವೇದಮೂರ್ತಿ ಶ್ರೀಧರ ಹೆಗ್ಡೆ
ಶ್ರೀ ಕೆ. ರಘುಪತಿ ಭಟ್, ಶಾಸಕರು, ಉಡುಪಿ
ಶ್ರೀ ಪ್ರಮೋದ್ ಮಧ್ವರಾಜ್, ಉದ್ಯಮಿ, ಮಲ್ಪೆ
ಶ್ರೀ ಪಿ. ಶ್ಯಾಮ್ ರಾವ್ ಪಾಂಡೇಶ್ವರ
ಶ್ರೀ ಜಯರಾಮ್ ಶೆಟ್ಟಿ
ಶ್ರೀ ಬಿ. ರಾಜೇಶ್ ಶೆಟ್ಟಿ ಬಿರ್ತಿ

**ಅಧ್ಯಕ್ಷರು :** ಶ್ರೀ ಅಶೋಕ್ ನಾಯರಿ

**ಕಾರ್ಯಾಧ್ಯಕ್ಷರು :** ಶ್ರೀ ಬಿ. ಸುಪ್ರಸಾದ್ ಶೆಟ್ಟಿ, ಧರ್ಮದರ್ಶಿಗಳು, ಮಹಿಷಮರ್ದಿನಿ ದೇವಸ್ಥಾನ, ನೀಲಾವರ

**ಉಪಾಧ್ಯಕ್ಷರು :** ಶ್ರೀ ಜಗನ್ನಾಥ ಶೆಟ್ಟಿ, ಶ್ರೀ ಗಣೇಶ್ ಆಚಾರ್ಯ, ಶ್ರೀ ರತ್ನಾಕರ ಶೆಟ್ಟಿ, ಶ್ರೀ ಮಧುಕರ್ ಹೊಸಮನೆ
ಶ್ರೀ ಪ್ರಭಾಕರ ಶೆಟ್ಟಿ ದಾವಣಗೆರೆ, ಶ್ರೀ ಅಶೋಕ್ ಭಟ್ ಚಾಂತಾರು, ಶ್ರೀ ರಘುಪತಿ ಬ್ರಹ್ಮಾವರ
ಶ್ರೀ ಪದ್ಮನಾಭ ಶೆಟ್ಟಿ, ಶ್ರೀ ಸಂಜೀವ ಪೂಜಾರಿ ಅಗ್ರಹಾರ, ಶ್ರೀ ಚಂದ್ರಶೇಖರ ಶೆಟ್ಟಿ, ಅಗ್ರಹಾರ

**ಪ್ರಧಾನ ಕಾರ್ಯದರ್ಶಿ :** ಶ್ರೀ ದಿವಾಕರ್ ಭಟ್

**ಕಾರ್ಯದರ್ಶಿ :** ಶ್ರೀ ಪ್ರಶಾಂತ್ ಕುಮಾರ್, ಶ್ರೀ ದಿನೇಶ್, ಶ್ರೀ ಮಹೇಶ್ ಮ್ಯೊಲಿ, ಶ್ರೀ ಕೃಷ್ಣ ರಾವ್ ಪಿ., ಶ್ರೀ ಲಕ್ಷ್ಮೀನಾರಾಯಣ ಭಟ್
ಶ್ರೀ ಆನಂದ ದಾಮ್ಲೆ, ಶ್ರೀ ಸುಧಾಕರ ನಾಯರಿ, ಶ್ರೀ ಶೇಖರ ಭಂಡಾರಿ, ಶ್ರೀ ವಿಶ್ವನಾಥ ಶೆಟ್ಟಿ ಸದಾರತ್ನ, ಶ್ರೀ ಲವ ಪೂಜಾರಿ
ಶ್ರೀ ರಾಘವೇಂದ್ರ ದೇವಾಡಿಗ, ಶ್ರೀ ರಾಘವೇಂದ್ರ, ಶ್ರೀ ಮಂಜುನಾಥ ಭಂಡಾರಿ, ಶ್ರೀ ಕೃಷ್ಣ ಆಚಾರ್ಯ

**ಖಜಾಂಚಿ :** ಶ್ರೀ ಶಶಿಕಾಂತ್ ರಾವ್ ಪಿ.

**ಗೌರವ ಸಲಹೆಗಾರರು :** ವೇದಮೂರ್ತಿ ಶ್ರೀ ಲಕ್ಷ್ಮೀನಾರಾಯಣ ಅಡಿಗ, ಶ್ರೀ ರಾಮಚಂದ್ರ ಟಿ. ಭಟ್, ಶ್ರೀಮತಿ ನಾಗವೇಣಿ, ಶ್ರೀ ಸಂಜೀವ ಅಮೀನ್
ಶ್ರೀ ಸದಾಶಿವ ನಾಯಕ್, ಶ್ರೀ ಶ್ರೀನಿವಾಸ್ ನಾಯಕ್, ಶ್ರೀ ಶಂಕರ ಪೂಜಾರಿ ಅಂಗಡಿಬೆಟ್ಟು,
ಶ್ರೀ ಪಾಂಡುರಂಗ ನಾಯಕ್ ಅಂಗಡಿಬೆಟ್ಟು, ಶ್ರೀ ಸಂತೋಷ ಪೂಜಾರಿ ಅಂಗಡಿಬೆಟ್ಟು, ಶ್ರೀ ವೆಂಕಟ್ರಾಯ ನಾಯಕ್
ಶ್ರೀ ಪ್ರಶಾಂತ ಶೆಟ್ಟಿ, ಶ್ರೀ ಐ. ವಿಶ್ವನಾಥ ಶೆಟ್ಟಿ, ಶ್ರೀ ಶೇಖರ ದೇವಾಡಿಗ, ಶ್ರೀ ಐತಪ್ಪ ಶೆಟ್ಟಿಗಾರ, ಶ್ರೀ ಮಂಜುನಾಥ ನಾಯರಿ

**ಕಾರ್ಯಕಾರಿ ಸಮಿತಿ ಸದಸ್ಯರು :** ಶ್ರೀ ಉದಯ ಮಠದಬೆಟ್ಟು, ಶ್ರೀ ಪ್ರದೀಪ ಶೆಟ್ಟಿ, ಶ್ರೀ ಅರುಣ್ ಅಡಿಗ, ಶ್ರೀ ಶ್ರೀಕಾಂತ ಭಂಡಾರಿ, ಶ್ರೀ ಶ್ರೀನಾಥ ಭಂಡಾರಿ, ಶ್ರೀ ರೂಪೇಶ್ ಶೆಟ್ಟಿ, ಶ್ರೀ ರಾಜೇಶ್ ದೇವಾಡಿಗ , ಶ್ರೀ ಆದರ್ಶ ನಾಯರಿ, ಶ್ರೀ ವಿಶ್ವನಾಥ ಪೂಜಾರಿ, ಶ್ರೀ ಗಣೇಶ ಹೊಸಮನೆ, ಶ್ರೀ ಮಹೇಶ್ ಶೆಟ್ಟಿ, ಶ್ರೀ ಅಕ್ಷಯ, ಶ್ರೀ ಕೃಷ್ಣ ಸೇರಿಗಾರ್, ಶ್ರೀ ಗೋಪಾಲ ದೇವಾಡಿಗ, ಶ್ರೀ ಪ್ರಭಾಕರ ದೇವಾಡಿಗ, ಶ್ರೀ ಗೌತಮ್, ಶ್ರೀ ಧನುಷ್ ಶೆಟ್ಟಿ, ಶ್ರೀ ಸುರೇಶ್ ಪೂಜಾರಿ, ಶ್ರೀ ಭರತ್ ದೇವಾಡಿಗ, ಶ್ರೀ ಪ್ರಭಾಕರ ಆಚಾರ್ಯ, ಶ್ರೀ ವಿಜಯ ನಾಯರಿ, ಶ್ರೀ ಅಣ್ಣಪ್ಪ ನಾಯರಿ, ಶ್ರೀ ಚಂದ್ರಶೇಖರ ನಾಯರಿ, ಶ್ರೀ ಗಣಪಯ್ಯ ನಾಯರಿ, ಶ್ರೀ ಮಾಧವ ಆಚಾರ್ಯ, ಶ್ರೀಮತಿ ಶ್ರೀದೇವಿ ನಾಯರ್ತಿ, ಶ್ರೀ ರಾಘವೇಂದ್ರ ಮಡಿಕುಳ, ಶ್ರೀ ಪ್ರಭಾಕರ ನಾಯರಿ, ಶ್ರೀ ಶಶಿಕಾಂತ್ ನಾಯರಿ, ಶ್ರೀ ನಾರಾಯಣ ನಾಯರಿ, ಶ್ರೀ ವಿಶ್ವನಾಥ ನಾಯರಿ, ಶ್ರೀ ಕೃಷ್ಣಸ್ವಾಮಿ ಜೋಯಿಸ್, ಶ್ರೀ ಗಣಪತಿ ನಾಯಕ್, ಶ್ರೀ ಮಧು, ಶ್ರೀ ಕುಶ ಪೂಜಾರಿ, ಶ್ರೀ ರಮೇಶ್ ನಾಯಕ್, ಶ್ರೀ ಗಣೇಶ್ ನಾಯಕ್, ಶ್ರೀ ನಾಥು, ಶ್ರೀ ಮಹೇಶ್ ಪೂಜಾರಿ, ಶ್ರೀ ಜಗನ್ನಾಥ ನಾಯಕ್, ಶ್ರೀ ಉದಯ ನಾಯಕ್, ಶ್ರೀ ಚಂದ್ರಶೇಖರ ನಾಯರಿ ಕಟ್ಟೆಮನೆ, ಶ್ರೀ ರಂಗ ದೇವಾಡಿಗ, ಶ್ರೀ ಸುಧಾಕರ, ಶ್ರೀ ಗುರುರಾಜ ಹಾಂಡ, ಶ್ರೀ ರಾಜೇಶ್ ರಾವ್, ಶ್ರೀ ಪುರುಷೋತ್ತಮ ಆಚಾರ್ಯ, ಶ್ರೀ ವಿವೇಕ ಕಾಮತ್, ಶ್ರೀ ರಾಮದಾಸ ಮಠದಬೆಟ್ಟು, ಶ್ರೀ ರಾಘವೇಂದ್ರ ಕೆದ್ಲಾಯ, ಶ್ರೀ ಕೃಷ್ಣದೇವ ಕಲ್ಕೂರ, ಶ್ರೀ ಹರಿಕೃಷ್ಣ ಹೊಳ್ಳ, ಶ್ರೀ ಬಾಲಕೃಷ್ಣ ಶೆಟ್ಟಿ, ಶ್ರೀ ಆನಂದ, ಶ್ರೀ ನಾಗೇಶ್ ಪೈ, ಶ್ರೀ ಶ್ರೀಧರ ಭಂಡಾರಿ, ಶ್ರೀ ಕೇಶವ ಆಚಾರ್ಯ

**ಸದಸ್ಯರು :** ಶ್ರೀ ಕೃಷ್ಣಮೂರ್ತಿ ಭಟ್, ಶ್ರೀ ರಾಮಚಂದ್ರ ಭಟ್, ಶ್ರೀ ದಿನಕರ್ ರಾವ್, ಶ್ರೀ ಗಣೇಶ ಹೊಸಮನೆ, ಶ್ರೀಮತಿ ಗುಲಾಬಿ ಶೆಡ್ತಿ, ಶ್ರೀಮತಿ ಪ್ರೇಮ ಬ್ಯಾ, ಶ್ರೀ ಚಂದ್ರ ನಾಯರಿ, ಶ್ರೀ ಭರತ್ ಸೇರಿಗಾರ್, ಶ್ರೀ ಸುರೇಶ್ ಪೂಜಾರಿ, ಶ್ರೀಮತಿ ಲಕ್ಷ್ಮೀ ಪೂಜಾರ್ತಿ, ಶ್ರೀ ಲಕ್ಷ್ಮಣ ಪೂಜಾರಿ, ಶ್ರೀ ಮಂಜುನಾಥ ನಾಯರಿ, ಶ್ರೀ ಮಾಧವ ಖಾರ್ವಿ, ಶ್ರೀ ಪ್ರಭಾಕರ ಆಚಾರ್ಯ, ಶ್ರೀ ಸಂಜೀವ ಪೂಜಾರಿ, ಶ್ರೀ ಅಣ್ಣಪ್ಪ ನಾಯರಿ, ಶ್ರೀ ವಿಜಯ ನಾಯರಿ, ಶ್ರೀ ಚಂದ್ರಶೇಖರ ನಾಯರಿ, ಶ್ರೀ ಗಣಪಯ್ಯ ನಾಯರಿ, ಶ್ರೀ ಗಣಪತಿ, ಶ್ರೀ ದಿವಾಕರ್ ಪೈ, ಶ್ರೀ ಮಾಧವ ಆಚಾರಿ, ಶ್ರೀಮತಿ ಶ್ರೀದೇವಿ, ಶ್ರೀ ರಾಜ್‌ಗೋಪಾಲ್, ಶ್ರೀಮತಿ ಪ್ರಭಾವತಿ ನಾಯರಿ, ಶ್ರೀ ನಟರಾಜ್ ನಾಯರಿ, ಶ್ರೀ ಪ್ರಭಾಕರ್, ಶ್ರೀಮತಿ ಬಿ. ಸುಬ್ಬಕ್ಕ, ಶ್ರೀ ನಾರಾಯಣ ನಾಯರಿ, ಶ್ರೀ ವಿಶ್ವನಾಥ ನಾಯರಿ, ಶ್ರೀ ವಿಶ್ವನಾಥ ಶೆಟ್ಟಿ, ಶ್ರೀಮತಿ ಕೆ. ಪ್ರೇಮಗೋಪಾಲ, ಶ್ರೀ ಕೃಷ್ಣಪ್ಪ, ಶ್ರೀ ಜಗದೀಶ್ ರಾವ್, ಶ್ರೀ ಗಣಪತಿ ಭಟ್, ಶ್ರೀಮತಿ ಭಾರತಿ ನಾಯಕ್, ಶ್ರೀ ಕೆ.ಎಸ್. ಪುರುಷೋತ್ತಮ್ ಶೆಟ್ಟಿ, ಶ್ರೀ ನಟರಾಜ್ ಶೆಟ್ಟಿ, ಶ್ರೀ ಎಂ. ದೇವರಾಜ್ ರಾವ್, ಶ್ರೀ ಮಿಜರಾ ಪೂಜಾರಿ, ಶ್ರೀ ಸುಂದರ ಆಚಾರಿ, ಶ್ರೀ ಎ. ನಾಥು, ಶ್ರೀ ಗಣೇಶ ದೇವಾಡಿಗ, ಶ್ರೀ ಮಂಜುನಾಥ, ಶ್ರೀಮತಿ ಪಾವರ್ತಿ, ಶ್ರೀ ಸತೀಶ, ಶ್ರೀ ರಮೇಶ, ಶ್ರೀ ಪದ್ಮನಾಭ ಗಾಣಿಗ, ಶ್ರೀ ಜಗನ್ನಾಥ ನಾಯಕ್, ಶ್ರೀ ಉದಯ, ಶ್ರೀ ಶಾರದಾ ನಾಯರಿ, ಶ್ರೀಮಣಿ ಅಮ್ಮಣ್ಣಿ, ಶ್ರೀಮತಿ ಲಲಿತಾ, ಶ್ರೀ ಭಾಸ್ಕರ್ ನಾಯಕ್, ಶ್ರೀ ಸುರೇಶ್ ನಾಯಕ್, ಶ್ರೀಮತಿ ಶ್ರೀಮತಿ, ಶ್ರೀಮತಿ ಸುಶೀಲ, ಶ್ರೀ ಕೊಗ್ಗ ನಾಯಕ್, ಶ್ರೀ ಜಯಂತ್ ರಾವ್, ಶ್ರೀಮತಿ ಪ್ರೇಮ ರಾವ್, ಶ್ರೀ ಪುರುಷೋತ್ತಮ ಆಚಾರ್ಯ, ಶ್ರೀ ನಾಗೇಶ್ ಪೈ, ಶ್ರೀಮತಿ ಆಶಾಲತಾ ಸಿ. ಶೆಟ್ಟಿ, ಶ್ರೀ ಎಸ್. ಕೆ. ಆನಂದ, ಶ್ರೀ ಕೆ. ದಿನಮಣಿ ಶಾಸ್ತ್ರಿ, ಶ್ರೀ ಅಶೋಕ್ ಶೆಟ್ಟಿ, ಶ್ರೀ ಚಂದ್ರಹಾಸ ಕಾಂಚನ್, ಶ್ರೀ ಗೋಪಾಲ ಎಮ್. ಶೆಟ್ಟಿ, ಶ್ರೀ ಸುಧಾಕರ ಶೆಟ್ಟಿ, ಶ್ರೀ ಪ್ರವೀಣ ಕುಮಾರ್ ಶೆಟ್ಟಿ, ಶ್ರೀ ದಯಾನಂದ ಶೆಟ್ಟಿ, ಶ್ರೀ ರಾಮಚಂದ್ರ ಭಟ್, ಶ್ರೀ ರಾಜು ಸೇರಿಗಾರ್, ಶ್ರೀ ಜಗನ್ನಾಥ್ ಶೆಟ್ಟಿ, ಶ್ರೀಮತಿ ಗುಲಾಬಿ ಶೆಟ್ಟಿ, ಶ್ರೀ ಮೋನಪ್ಪ ಶೆಟ್ಟಿ, ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಬಾಲಚಂದ್ರ ಕಲ್ಕೂರ, ಶ್ರೀ ಕೆ. ಮೋಹನ ಶೆಟ್ಟಿ, ಶ್ರೀಮತಿ ಶಾರದ ವಿ. ಆಚಾರ್ಯ, ಶ್ರೀಮತಿ ಸೀಮ ಎನ್. ಶೆಟ್ಟಿ, ಶ್ರೀ ಉಮೇಶ್ ದೇವಾಡಿಗ, ಶ್ರೀ ಯು. ಅಣಯ್ಯ, ಶ್ರೀ ಜಗದೀಶ, ಶ್ರೀ ಗಣೇಶ, ಶ್ರೀಮತಿ ಹೆಚ್. ಎಸ್. ಸರಸ್ವತಿ, ಶ್ರೀಮತಿ ರಾಜಲಕ್ಷ್ಮೀ ಆರ್. ಶೆಟ್ಟಿ, ಶ್ರೀ ರವೀಂದ್ರ ಭಟ್, ಶ್ರೀಮತಿ ಲಲಿತಾ, ಶ್ರೀಮತಿ ಗೌರಿ ಶೆಟ್ಟಿ, ಶ್ರೀ ಶಂಕರ ಕರ್ಕೇರ, ಶ್ರೀ ಗುಂಡು ಶೆಟ್ಟಿ, ಶ್ರೀ ಆನಂದ ಶೆಟ್ಟಿ, ಶ್ರೀಮತಿ ರಾಜೀವಿ ಪೂಜಾರ್ತಿ,ಶ್ರೀ ವಸಂತ ಸೇರಿಗಾರ್, ಶ್ರೀಮತಿ ಪಾರ್ವತಿ ದೇವಾಡಿಗ, ಶ್ರೀಮತಿ ಕಲ್ಯಾಣಿ ಪೂಜಾರ್ತಿ, ಶ್ರೀಮತಿ ಚಿಕ್ಕಿ ಶೆಡ್ತಿ, ಶ್ರೀಮತಿ ಮುಟ್ಟಿ ಶೆಡ್ತಿ, ಶ್ರೀಮತಿ ಶಾರದಾ, ಶ್ರೀ ಪ್ರಭಾಕರ್, ಶ್ರೀ ಕೆ. ಗಣಪತಿ ವೈಲಾಯ, ಶ್ರೀ ವೇಣುಗೋಪಾಲ, ಶ್ರೀ ಗೋಪಾಲ, ಶ್ರೀ ವಿಶ್ವನಾಥ ಶೆಟ್ಟಿ, ಶ್ರೀಮತಿ ಲಕ್ಷ್ಮೀ ಭಂಡಾರ್ತಿ, ಶ್ರೀಮತಿ ಸರಸ್ವತಿ ಹೆಗ್ಡೆ, ಶ್ರೀಮತಿ ಶಾರದಾ ಎನ್. ನಾಯರಿ, ಶ್ರೀ ಕೃಷ್ಣಯ್ಯ ಗಾಣಿಗ, ಶ್ರೀ ಶ್ರೀಧರ ಆಚಾರ್ಯ, ಶ್ರೀ ಸದಾನಂದ ಗಾಣಿಗ, ಶ್ರೀಮತಿ ಯಶೋಧ, ಶ್ರೀ ಮಂಜುನಾಥ, ಶ್ರೀ ವಿಶ್ವನಾಥ, ಶ್ರೀ ವಾಸುದೇವ, ಶ್ರೀ ಕೃಷ್ಣ, ಶ್ರೀ ಚಂದ್ರಶೇಖರ ಶೆಟ್ಟಿ, ಶ್ರೀ ಭುಜಂಗ ಶೆಟ್ಟಿ, ಶ್ರೀ ನಂದು, ಶ್ರೀ ಗೋಪಾಲ ದೇವಾಡಿಗ, ಶ್ರೀಮತಿ ಗುಲಾಬಿ, ಶ್ರೀ ಸಂಜೀವ, ಶ್ರೀಮತಿ ಲಕ್ಷ್ಮೀ ಭಂಡಾರ್ತಿ

Mob.: 9845097001, 9845435934, 9449208992 kashivishwanatha.temple@gmail.com